## 2 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು

## ಎಸ್.ಸಿ. ನಂ. 68 /2025

P.W : 1

C.W: 2

**ದಿನಾಂಕ 08.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

| | | |
|---|---|---|
| **ಹೆಸರು** | : | ಹತೀಕ್ ಹುರ್ ರೆಹಮಾನ್ ಶರೀಫ್ |
| **ತಂದೆಯ ಹೆಸರು** | : | ಲೇಟ್ ಮಹಮ್ಮದ್ ಜಾಫರ್ ಶರೀಫ್ |
| **ವಯಸ್ಸು** | : | 50 ವರ್ಷ |
| **ವೃತ್ತಿ** | : | ವ್ಯಾಪಾರ |
| **ವಾಸಸ್ಥಳ** | : | ಶಿರಾ |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಸಾಕ್ಷಿ ಒಂದು ದಾಖಲೆಯಲ್ಲಿ ತನ್ನ ಸಹಿ ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯು ಸ್ಥಳ ಪಂಚನಾಮೆಯಾಗಿದ್ದು, ಇದನ್ನು ನಿ.ಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ನನ್ನ ಅಂಗಡಿ ಶಿರಾದಲ್ಲಿ ಮೃತ ಪ್ರಕಾಶ್ ರವರ ಅಂಗಡಿಯ ಮುಂಭಾಗ ಇದೆ. ಪ್ರಕಾಶ್ ರವರದು ಬ್ಯಾಗ್ ಅಂಗಡಿಯಾಗಿತ್ತು. ದಿ.17.10.2020 ರಂದು ಶಿರಾ ನಗರ ಪೋಲೀಸರು ಪ್ರಕಾಶ್ ರವರ ಅಂಗಡಿ ಬಳಿ ಬಂದು ಪ್ರಕಾಶ್ ರವರ ಸಾವಿನ ಕುರಿತಾಗಿ ಸ್ಥಳ ಪಂಚನಾಮೆ ಮಾಡಿದ್ದಾಗಿ ನಾನು ಸ್ಥಳದಲ್ಲಿ ಹಾಜರಿದ್ದು ಸ್ಥಳ ಪಂಚನಾಮೆಗೆ ಸಹಿ ಮಾಡಿದ್ದೇನೆ. ಕೃತ್ಯ ಸ್ಥಳವನ್ನು ಮೃತನ ಹೆಂಡತಿ ಚಾ.ಸಾ.1 ರವರು ತೋರಿಸಿದರು. ಮಹಜರನ್ನು ಸಂಜೆ 04.30 ರಿಂದ ಅರ್ಧ ಗಂಟೆವರೆಗೆ

ಮಾಡಿರುತ್ತಾರೆ. ನನ್ನ ಜೊತೆ ಹಯಾಕ್ ಸಾಬ್ ಎಂಬ ವ್ಯಕ್ತಿ ಹಾಜರಿದ್ದು ಪಂಚನಾಮೆಗೆ ಸಹಿ ಮಾಡಿದೆವು. ಮಹಜರ್ ದಿನಪೋಲೀಸರು ಛಾಯಾಚಿತ್ರವನ್ನು ತೆಗೆದಿರುತ್ತಾರೆ. ಸದರಿ ಛಾಯಾಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.2 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿಗಳ ಪರ ವಕೀಲರಿಂದ**

ಪಾಟೀ ಸವಾಲಿಗಾಗಿ ಮುಂದೂಡಲಾಯಿತು

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

2 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.